3) ಈ ಕುರಿತು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಸಿ. ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

1) ಪ್ರಸ್ತುತ ಸಾಲಿನಲ್ಲಿ 12 ನೇ ಹಣಕಾಸು ಆಯೋಗದ ಯೋಜನೆಯಡಿ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ಹಾಗೂ ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಯೋಜನೆಯಡಿ ದುರಸ್ತಿ/ ಅಭಿವೃದ್ಧಿಗಾಗಿ ಅನುದಾನ ಒದಗಿಸಲಾಗುತ್ತಿದೆ.

2) & 3) ಅನುದಾನಕ್ಕನುಗುಣವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

1604 (1976) ಶೀ ಮೋಹನ್ ಪಿ.ಸಿ. (ಚಿಕ್ಕಪೇಟೆ) :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆಯಲ್ಲಿರುವ ಸರ್ಕಾರಿ ಅನುದಾನಿತ, ಖಾಸಗಿ, ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು;

ಆ) ಈ ಶಾಲೆಗಳಲ್ಲಿರುವ ಶಿಕ್ಷಕರ ಸಂಖ್ಯೆ ಎಷ್ಟು (ವಲಯವಾರು ವಿವರ ನೀಡುವುದು);

ಇ) ಈ ಶಿಕ್ಷಕರಿಗೆ ಕಳೆದ 2 ವರ್ಷಗಳಿಂದ ವೇತನ ದೊರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ವೇತನ ನೀಡದೇ ಇರಲು ಕಾರಣಗಳೇನು;

ಉ) ರಾಜ್ಯದ ಇತರೆಡೆಗಳಲ್ಲಿ ಸರ್ಕಾರವೇ ಈ ಅನುದಾನಿತ ಶಾಲಾ ಶಿಕ್ಷಕರಿಗೆ ವೇತನ ನೀಡುವ ಅಥವಾ ಬೇರೆ ಸರ್ಕಾರಿ ಶಾಲೆಗಳಿಗೆ ಹೆಚ್ಚುವರಿಯಾಗಿ ಕಳಿಸುವ ಮೂಲಕ ಜೀವನಾಂಶ ಕಲ್ಪಿಸುತ್ತಿರುವ ರೀತಿಯೇ ಈ ವಲಯದ ಶಿಕ್ಷಕರಿಗೂ ಪರ್ಯಾಯ ವ್ಯವಸ್ಥೆ ಕಲ್ಪಿಸುವಲ್ಲಿ ಸರ್ಕಾರದ ನಿಲುವೇನು;

ಊ) ಈ ಅನುದಾನಿತ ಶಾಲೆಗಳ ಶಿಕ್ಷಕರಿಗೆ ತಕ್ಷಣ ವೇತನ ನೀಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) **ಸರ್ಕಾರಿ ಶಾಲೆಗಳು**

ಪ್ರಾಥಮಿಕ ಶಾಲೆಗಳು – 1433
ಪ್ರೌಢ ಶಾಲೆಗಳು – 114

ಅನುದಾನಿತ ಶಾಲೆಗಳು

ಪ್ರಾಥಮಿಕ ಶಾಲೆಗಳು – 512
ಪ್ರೌಢ ಶಾಲೆಗಳು – 246

ಆ) ವಲಯ	ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರು		ಅನುದಾನಿತ ಶಾಲೆಗಳಲ್ಲಿನ ಶಿಕ್ಷಕರು	
	ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು	ಪ್ರಾಥಮಿಕ ಶಾಲೆಗಳು	ಪ್ರೌಢ ಶಾಲೆಗಳು
ಉ. ವ.– 1	654	118	574	391
ಉ. ವ.– 2	325	136	342	207
ಉ. ವ.– 3	505	79	456	425
ಉ. ವ.– 4	958	190	51	54
ದ. ವ. –1	928	134	361	194
ದ. ವ. –2	52	118	762	289
ದ. ವ. –3	864	153	733	576
ದ. ವ. –4	971	230	244	264
ಆನೇಕಲ್	945	85	55	115

ಇ) ಸರ್ಕಾರದ ದಿನಾಂಕ 09–06–2005 ರ ಆದೇಶ ಸಂಖ್ಯೆ ಇಡಿ 200 ಪಿಎಂಸಿ 1999 ರನ್ವಯ ರಾಜ್ಯದಲ್ಲಿನ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ನಿಗದಿತ ಕಾರ್ಯಭಾರವಿಲ್ಲದೆ ದಿನಾಂಕ 15–02–2005 ರ

ಪೂರ್ವದಲ್ಲಿ ಉಂಟಾದ ಹೆಚ್ಚುವರಿ ಶಿಕ್ಷಕರನ್ನು ಕಾರ್ಯಭಾರವಿರುವ ಇತರೆ ಅನುದಾನಿತ ಖಾಸಗಿ ಶಾಲೆಗಳಿಗೆ ಮರುಹಂಚಿಕೆ ಮಾಡಿ ವೇತನವನ್ನು ಪಾವತಿಸಲಾಗುತ್ತಿದೆ. ಆದರೆ, ದಿನಾಂಕ 15–02–2005 ನಂತರ ಉಂಟಾದ ಹೆಚ್ಚುವರಿ ಶಿಕ್ಷಕರಿಗೆ ಮಾತ್ರ ಸಹಾಯಧನವನ್ನು ಪಾವತಿಸಲಾಗುತ್ತಿರಲಿಲ್ಲ. ಆದರೆ, ಸರ್ಕಾರದ ದಿನಾಂಕ 08–02–2007 ರ ಸುತ್ತೋಲೆ ಸಂಖ್ಯೆ ಇಡಿ 32 ಪಿಎಂಸಿ 2007 ರನ್ವಯ ಈ ಕೆಳಗೆ ಉದ್ದರಿಸಿದಂತೆ ಸೂಚಿಸಲಾಗಿದೆ.

"4) ದಿನಾಂಕ 9–05–2005 ರ ಸದರಿ ಆದೇಶದ ಯೋಜನೆಯಲ್ಲಿನ ಕಂಡಿಕೆ 1 ರಲ್ಲಿ ಉಲ್ಲೇಖಿಸಲಾದ ದಿನಾಂಕ 15–02–2005 ರ ಕಟ್ ಆಫ್ ದಿನಾಂಕವನ್ನು ತೆಗೆದುಹಾಕಬೇಕೆ? ಮತ್ತು ಹೆಚ್ಚುವರಿ ಶಿಕ್ಷಕರ ಮರು ಹಂಚಿಕೆಯ ಪ್ರಕ್ರಿಯೆಯು ಒಂದು ನಿರಂತರ ಪ್ರಕ್ರಿಯೆಯೆಂದು ಪರಿಗಣಿಸಬೇಕೇ? ಹಾಗೂ ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಒಂದು ಕಟ್ ಆಫ್ ಡೇಟ್ ಹಾಗೂ ಒಂದು ಬಾರಿ ಯೋಜನೆ ಎಂಬ ಷರತ್ತನ್ನು ವಿಧಿಸುವುದು ಸೂಕ್ತವೇ? ಎಂಬ ಅಂಶಗಳನ್ನು ಸರ್ಕಾರ ಪುನರ್ ಪರಿಶೀಲಿಸುತ್ತಿದೆ. ಈ ಕುರಿತು ಸರ್ಕಾರ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳಲು ಕಾಲಾವಕಾಶ ಬೇಕಾಗಿದೆ.

5) ಮೇಲಿನ ಕಂಡಿಕೆ 4 ರಲ್ಲಿ ಉಲ್ಲೇಖಿಸಲಾದ ಪರಿಶೀಲನೆಯ ನಂತರ ಸರ್ಕಾರ ತೆಗೆದುಕೊಳ್ಳಬಹುದಾದ ತೀರ್ಮಾನವನ್ನು ಬಾಕಿ ಇಟ್ಟು ದಿನಾಂಕ 15–02–2005 ರ ನಂತರ ಉಂಟಾದ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರುಗಳನ್ನು ಹಾಗೂ ದಿನಾಂಕ 31–05–2007 ರ ಕಟ್ ಆಫ್ ದಿನಾಂಕದ ಒಳಗಡೆ ಹಂಚಿಕೆಯಾಗಿ ಸರಿದೂಗಿಸಲಾಗದ ಹೆಚ್ಚುವರಿ ಶಿಕ್ಷಕರನ್ನು ಸರ್ಕಾರ ಈ ಕುರಿತು ಮುಂದಿನ ಸೂಚನೆ ನೀಡುವವರೆಗೆ ಸದ್ಯಕ್ಕೆ ರಿಟ್ರೆಂಚ್ ಮಾಡಕೂಡದೆಂದು ಈ ಮೂಲಕ ಸೂಚಿಸಲಾಗಿದೆ."

ಈ ವರ್ಗದ ಶಿಕ್ಷಕರನ್ನು ಹೊರತುಪಡಿಸಿ ಉಳಿದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರಿಗೆ ನಿಯಮಿತವಾಗಿ ಪ್ರತಿ ತಿಂಗಳು ವೇತನ ನೀಡಲಾಗುತ್ತಿದೆ.

ಊ) ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರನ್ನು

ಕಾರ್ಯಭಾರ ಇರುವ ಇತರ ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಹಂಚಿಕೆ ಮಾಡಲು ನಿಯಮಗಳಲ್ಲಿ ಅಸ್ಪದ ಇರುತ್ತದೆ. ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಊ) ಅನುದಾನಿತ ಶಾಲೆಗಳ ಶಿಕ್ಷಕರಿಗೆ ಸಕಾಲದಲ್ಲಿ ಸಹಾಯಾನುದಾನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

1604 (1897) ಶ್ರೀ ಮುನಿಯಪ್ಪ ಎಸ್. ಎಂ. (ಚಿಕ್ಕಬಳ್ಳಾಪುರ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ನಗರದಲ್ಲಿ ಸಂಜೆ ಕಾಲೇಜು ನಷ್ಟದಲ್ಲಿ ನಡೆಯುತ್ತಿರುವ ವಿಚಾರ ಸರ್ಕಾರದ ಗಮನದಲ್ಲಿ ಇದೆಯೇ;

ಆ) ಚಿಕ್ಕಬಳ್ಳಾಪುರ ನಗರದಲ್ಲಿ ಪ್ರತ್ಯೇಕ ಮಹಿಳಾ ಕಾಲೇಜು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸಂಜೆ ಕಾಲೇಜನ್ನು ಬದಲಾಯಿಸಿ ಪ್ರತ್ಯೇಕ ಮಹಿಳಾ ಕಾಲೇಜನ್ನು ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಅಂತಹ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

1606 (1899) ಶ್ರೀ ಮುನಿಯಪ್ಪ ಎಸ್. ಎಂ. (ಚಿಕ್ಕಬಳ್ಳಾಪುರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ದೈಹಿಕ ಶಿಕ್ಷಕರನ್ನು ನೇಮಕ ಮಾಡುವುದು ಕಡ್ಡಾಯವಲ್ಲವೆ;